ಮೂಡಬಿದರಿಯಲ್ಲಿ ಕಟ್ಟಿದ 4 'ಸಿ' ಹಾಗೂ 4 'ಡಿ' ಮಾದರಿಯ ಮಳಿಗೆಗಳನ್ನು 1985ರಲ್ಲಿ ಹಾಗೂ ತದನಂತರ ವಿತರಣೆ ಮಾಡಿ ಹಂಚಿಕೆದಾರರ ಸ್ವಾಧೀನಕ್ಕೆ ನೀಡಲಾಗಿದೆ.

ಈ ಕೈಗಾರಿಕಾ ವಸಾಹತುವಿಗೆ ಅಗತ್ಯ ಮೂಲಭೂತ ಸೌಲಭ್ಯಗಳಾದ ನೀರು, ವಿದ್ಯುತ್, ರಸ್ತೆ ಒಳಚರಂಡಿ ವ್ಯವಸ್ಥೆ ಮುಂತಾದವುಗಳನ್ನು ಮೊದಲಿನಿಂದಲೂ ಕಲ್ಪಿಸಲಾಗಿದೆ.

ಇತ್ತೀಚೆಗೆ ನಿಗಮದ ನಿರ್ದೇಶಕರ ಮಂಡಳಿಯ ಆದೇಶದನ್ವಯ ಮಳಿಗೆಯ ಬೆಲೆಯನ್ನು ಪುನರ್ ನಿಗದಿ ಮಾಡಲಾಗಿದ್ದು ಈ ಹಿಂದೆ ನಿರ್ಧರಿಸಿದ ಬೆಲೆಗಿಂತ ಈಗ ನಿರ್ಧರಿಸಲಾಗಿರುವ ಅಂತಿಮ ಬೆಲೆಯು ಸಾಕಷ್ಟು ಕಡಿಮೆಯಾಗಿದ್ದು ಈ ಬೆಲೆಯನ್ನು ಸಂಬಂಧಪಟ್ಟ ಉದ್ದಿಮೆದಾರರಿಗೆ ತಿಳಿಸಲಾಗಿದೆ. ಹಿಂದೆ ತಾತ್ಕಾಲಿಕವಾಗಿ ನಿರ್ಧರಿಸಲಾಗಿದ್ದ ಹಾಗೂ ಈಗ ಅಂತಿಮವಾಗಿ ನಿರ್ಧರಿಸಲಾಗಿರುವ ಬೆಲೆಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಕೆಲವು ಮಳಿಗೆಗಳನ್ನು ವಿತರಣೆದಾರರು ಕೊಡಬೇಕಾಗಿದ್ದ ಕಂತುಗಳು ಹೆಚ್ಚಾಗಿದ್ದರಿಂದ ನಿಗಮದ ಸ್ವಾಧೀನಕ್ಕೆ ವಾಪಸ್ಸು ಪಡೆಯಲಾಗಿದ್ದು ವಿತರಣೆದಾರರು ಅನುಭವಿಸುತ್ತಿರುವ ವಿದ್ಯುತ್ ತೊಂದರೆಯಿಂದಾಗಿ ಅವರಿಗೆ ಬಾಕಿ ಇರುವ ಹಣವನ್ನು ಸುಲಭ ಕಂತುಗಳಲ್ಲಿ ಮರು ಪಾವತಿ ಮಾಡಲು ಅವಕಾಶ ನೀಡಲಾಗಿದೆಯಲ್ಲದೆ ಮಳಿಗೆಗಳನ್ನು ಅವರ ಸ್ವಾಧೀನಕ್ಕೆ ವಾಪಸ್ಸು ನೀಡಲು ಸಂಬಂಧ ಪಟ್ಟ ಶಾಖಾಧಿಕಾರಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

ಇಲ್ಲಿನ ವಿತರಣೆದಾರರು ವಿದ್ಯುತ್ ಸರಬರಾಜಿನಲ್ಲಿನ ಕಡಿಮೆ ವೋಲ್ಟೇಜ್ ಬಗ್ಗೆ ತೊಂದರೆ ಅನುಭವಿಸುತ್ತಿರುವುದಾಗಿ ದೂರು ಸಲ್ಲಿಸಿದ್ದು, ಈ ಬಗ್ಗೆ ಸೂಕ್ತ ಕ್ರಮವನ್ನು ಆದಷ್ಟು ಬೇಗನೆ ತೆಗೆದುಕೊಳ್ಳಬೇಕೆಂದು ಕೆ.ಇ.ಬಿ. ಯವರಿಗೆ ಬರೆದು ಮನವಿ ಮಾಡಿಕೊಳ್ಳಲಾಗಿದೆ.

STATEMENT SHOWING THE DIFFERENCE BETWEEN THE COST EARLIER FIXED AND FINALLY FIXED AT INDUSTRIAL ESTATE MOODABIDRI

Sl. No.	Shed No.	Cost intimated earlier	Final cost fixed.
1	C–5	Rs. 2,23,040–00	Rs. 1,58,535–00
2	C–6	2,23,040–00	1,58,535–00
3	C–7	2,23,040–00	1,58,535–00
4	C–8	2,23,040–00	2,14,020–00
5	D–9	1,38,341–00	1,06,957–00
6	D–10	1,36,341–00	1,06,957–00
7	D–11	1,60,000–00	1,44,400–00
8	D–12	1,11,488–00	1,06,957–00

ಶಾಸನ ರಚನೆ

ವಿಧೇಯಕಗಳನ್ನು ಮಂಡಿಸುವುದು

1. 1990ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ)

ವಿಧೇಯಕ : ಮಂಡನೆಗೆ ಅನುಮತಿ ಕೋರಿಕೆ :

ಶ್ರೀ ಜಿ. ಪುಟ್ಟಸ್ವಾಮಿ ಗೌಡ : (ವ್ಯವಸಾಯ ಮತ್ತು ತೋಟಗಾರಿಕಾ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1990ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ

ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ವಿಧೇಯಕವನ್ನು ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳ ಪರವಾಗಿ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರೇ : ಪ್ರಸ್ತಾವ ಹೀಗಿದೆ : "1990ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು".

ಪ್ರಸ್ತಾವ ಅಂಗೀಕೃತವಾಯಿತು ಮತ್ತು ಮಂಡನೆಗೆ ಅನುಮತಿಯನ್ನು ನೀಡಲಾಯಿತು.

SRI QUMARUL ISLAM:- We have not recieved the English version of the Bill. This is an important bill.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಮಾನ್ಯ ಅಧ್ಯಕ್ಷರೇ, 1990ನೇ ಇಸವಿಯ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Annexure (1)

ಅಧ್ಯಕ್ಷರು : ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲಾಯಿತು.

MR. SPEAKER : The Hon'ble Minister for Rural Development ...

SRI D.B. CHANDRE GOWDA : Sir, I raise to oppose the introduction of the bill. ಏಕೆಂದರೆ ಕರ್ನಾಟಕ ವಿಧಾನಸಭೆ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮ 80 ಹೀಗಿದೆ :

"80 ಮಂಡನೆಗೆ ಅನುಮತಿ ಕೋರಿ ಪ್ರಸ್ತಾವ : (1) ವಿಧೇಯಕವನ್ನು ಮಂಡಿಸುವ ಪ್ರಸ್ತಾವಕ್ಕೆ ಅನುಮತಿ ದೊರೆತ ನಂತರ ಪ್ರಸ್ತಾವದ ನಂತರ ಪ್ರಸ್ತಾವದ ಸಂಬಂಧದಲ್ಲಿ ವಿಧೇಯಕವನ್ನು ಮಂಡಿಸುವವನು, ಸಂಕ್ಷಿಪ್ತ ವಿವರಣಾತ್ಮಕ ವಿವರಣೆಯನ್ನು ನೀಡಬಹುದು. ಪ್ರಸ್ತಾವಕ್ಕೆ ವಿರೋಧ ಕಂಡುಬಂದಲ್ಲಿ, ಅದನ್ನು ವಿರೋಧಿಸುವ ಸದಸ್ಯನಿಗೆ ಸಂಕ್ಷಿಪ್ತ ವಿವರಣಾತ್ಮಕ ಹೇಳಿಕೆಯನ್ನು ನೀಡಲು ಹಾಗೂ ವಿಧೇಯಕವನ್ನು ಮಂಡಿಸಿದ ಸದಸ್ಯನಿಗೆ ಸಂಕ್ಷಿಪ್ತ ಉತ್ತರ ನೀಡಲು ಅನುಮತಿ ಕೊಡಬಹುದು. ಮತ್ತು ಆ ತರುವಾಯ ಯಾವುದೇ ಚರ್ಚೆಗೆ ಅವಕಾಶವಿಲ್ಲದೆ ಆ ಕುರಿತು ಪ್ರಶ್ನೆ "ಹಾಕತಕ್ಕದು." ಆದ್ದರಿಂದ I may please be permitted.

MR. SPEAKER : Is it after the introduction or before the introduction?

SRI D. B. CHANDRASHEKAR GOWDA : It is before the introduction. Once the Bill is introduced, it will come for voting. ಇದು ಬಹಳ ಮುಖ್ಯವಾದಂಥ ಒಂದು ತಿದ್ದುಪಡಿ ಮಸೂದೆ. ಒಂದು ಮಾತಿನಲ್ಲಿ ಹೇಳಬೇಕೆಂದರೆ, ಈ ಶಾಸನವನ್ನು ರಿಪೀಲ್ ಮಾಡಿದ್ದೇವೆ ಎಂದು ಹೇಳಿದ್ದರೆ ಅದು ಅರ್ಥವತ್ತಾಗಿರುತ್ತಿತ್ತು. ಅದರ ಬದಲಾಗಿ ಸರಿಸುಮಾರು 70ಕ್ಕೂ ಹೆಚ್ಚು ತಿದ್ದುಪಡಿಗಳನ್ನು ಈ ಶಾಸನಕ್ಕೆ ಈ ಸದನದಲ್ಲಿ ತರತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಬದಲಾವಣೆಯಾಗುತ್ತಲೇ ಇದ್ದಾರೆ. ಯಾರು ಏನು ಮಾತು ಕೊಟ್ಟರು ಎಂಬುದು ಅವರ ನೆನಪಿನಲ್ಲಿ ಉಳಿದಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಇಂಥ ಒಂದು ಮಹತ್ತರವಾದ ಮಸೂದೆಗೆ ತಿದ್ದುಪಡಿಯನ್ನು ತರತಕ್ಕ ಕಾಲದಲ್ಲಿ ಪ್ರತಿಪಕ್ಷಗಳನ್ನು ಕರೆದು ಮಾತನಾಡಿ ಚರ್ಚೆಸಿ, ಸಮಾಲೋಚನೆ ಮೂಲಕ ತರುತ್ತೇವೆ ಎಂಬ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಆ ಆಶ್ವಾಸನೆಯನ್ನು ಗಾಳಿಗೆ ತೂರಿ ಏಕಾಏಕಿ ಈ ಮಸೂದೆಯನ್ನು ಮಂಡಿಸತಕ್ಕಂಥ ಪ್ರಯತ್ನ ನಡೆದಿದೆ. ಇಲ್ಲಿ ಮುಖ್ಯವಾಗಿ ಇರತಕ್ಕದ್ದು ತಿದ್ದುಪಡಿ ಎಲ್ಲಿಂದ ಪ್ರಾರಂಭವಾಗಿದೆ ಎಂದರೆ, ನಾಮೆನ್‌ಕ್ಲೇಚರ್‌ನಿಂದಲೇ ಬದಲಾವಣೆಯಾಗುತ್ತದೆ. ನಾಮೆನ್‌ಕ್ಲೇಚರ್ ಆಫ್ ದಿ ಆಕ್ಟ್‌ನಲ್ಲೇ ಸ್ವೀಪಿಂಗ್ ಛೇಂಜಸ್ ಆಗಿದೆ. ಹಿಂದೆ ನಾನು ಶಾಸನಸಭಾ ಅಧ್ಯಕ್ಷನಾಗಿದ್ದಾಗ ಈ ಮಸೂದೆ ಮಂಡನೆ ಆಗಿ ತೀರ್ಮಾನವಾಯಿತು. ಹಾಗೆ ತೀರ್ಮಾನಕ್ಕೆ ಮುನ್ನ ಜಂಟೀ ಸಲಹಾ ಸಮಿತಿಗೆ ಸಹಾ ಈ ಮಸೂದೆ ಹೋಯಿತು. ನಂತರ ಅಲ್ಲಿ ಮಾಡಿರತಕ್ಕ ಕೆಲವು ಶಿಫಾರಸ್ಸುಗಳು ಏನಿವೆ, ಅವುಗಳ ವಿರುದ್ಧ ಈ ಶಾಸನವನ್ನು ತಂದಿದ್ದಾರೆ. ಜಂಟಿ ಸಲಹಾ ಸಮಿತಿ ಸುಮಾರು 29 ಸಾರಿ ಸಭೆ ಸೇರಿ ನಿರ್ಣಯಗಳನ್ನು ಮಾಡಿರತಕ್ಕ ಒಂದು ಮಹತ್ತರವಾದ ಬದಲಾವಣೆ. ಇದು ಕರ್ನಾಟಕದ ಶಾಸನವನ್ನು ಇಲ್ಲಿ ಮಾತ್ರವಲ್ಲ. ರಾಷ್ಟ್ರದ ವಿಭಿನ್ನ ಭಾಗದಲ್ಲಿ ಮಾತ್ರ ಅಲ್ಲ, ರಾಷ್ಟ್ರದ ಹೊರಗೂ ಕೂಡಾ ಚರ್ಚೆ ಮಾಡಿ ಇದರ ಬಗ್ಗೆ ಒಳ್ಳೆಯ ಮಾತನ್ನು ಕೆಲವರು ಆಡಿದ್ದಾರೆ. ಹಿಂದಿನ ಪ್ರಧಾನಮಂತ್ರಿಗಳಾದ ರಾಜೀವ್ ಗಾಂಧಿಯವರೂ ಕೂಡಾ